ಕಿ.ಮೀಗಳನ್ನು ಪರಿವೀಕ್ಷಿಸಲು ಸೂಚಿಸಿದಂತೆ ಪ್ರೊ. ಸುಬ್ಬರಾವ್ ರವರು ದಿನಾಂಕ. 24/25.02.05 ರಂದು ಸ್ಥಳವನ್ನು ವೀಕ್ಷಿಸಿರುತ್ತಾರೆ. ಅವರಿಂದ ವರದಿಯನ್ನು ನಿರೀಕ್ಷಿಸಲಾಗಿದೆ.

ಆ. ಪ್ರತಿ ವರ್ಷ ನೀರು ಹರಿಯದ ಸಮಯದಲ್ಲಿ ಕಾಲುವೆಯಲ್ಲಿ ಬಿದ್ದ ಹೂಳು ಮತ್ತು ಕಾಲುವೆಯ ಎರಡೂ ಬದಿಯಲ್ಲಿ ಬೆಳೆದ ಗಿಡಗಂಟಿಯನ್ನು ತೆಗೆದು ಸ್ವಚ್ಛ ಮಾಡಿಕೊಂಡು ನೀರನ್ನು ಸಮರ್ಪಕವಾಗಿ ಒದಗಿಸಲಾಗುತ್ತಿದೆ. ಆದರೆ ರೈತರು ಒಮ್ಮೊಮ್ಮೆ ತಮ್ಮ ಬೆಳೆಗಳಿಗೆ ಅಗತ್ಯಕ್ಕಿಂತ ಹೆಚ್ಚು ನೀರನ್ನು ಹಾಯಿಸಿಕೊಳ್ಳುವುದರಿಂದ, ರೈತರ ಜಮೀನು ಸವಳು ಜವಳು ಆಗಿರುವುದಲ್ಲದೇ, ಕಾಲುವೆಯ ಕೆಲವೊಂದು ಕಡೆ ಅಡ್ಡಮೋರಿಯಲ್ಲಿ ಸೋರುವಿಕೆಯಿರುವುದರಿಂದ ಭೂಮಿಯು ಜವಳಾಗುವ ಪರಿಸ್ಥಿತಿ ಇರುತ್ತದೆ.

ಇ. ಕೊಳಚೆ ಬಲದಂಡೆ ಕಾಳುವೆಯು ಒಟ್ಟು 49 ಕಿ.ಮೀ. ಉದ್ದವಿದ್ದು, ಅದರಲ್ಲಿ ರಾಮದುರ್ಗ ತಾಲ್ಲೂಕಿನಲ್ಲಿ ಸುಮಾರು 16 ಕಿಮೀ ಬರುತ್ತಿದ್ದು, ಇದರಲ್ಲಿ ಮೊದಲನೇ ಹಂತವಾಗಿ ಈಗ 0 ರಿಂದ 5 ಕಿ.ಮೀ. ವರೆಗೆ ಮಾತ್ರ ಕಾಂಕ್ರೀಟ್ ಲೈನಿಂಗ್ ಪ್ರಸ್ತಾವನೆಯು ಇದ್ದು, ಪ್ರೊ. ಸುಬ್ಬರಾವ್, ಐ.ಐ.ಎಸ್.ಸಿ. ಇವರು ಸ್ಥಳ ಪರಿವೀಕ್ಷಣೆ ಮಾಡಿದ್ದು ವರದಿಯನ್ನು ನಿರೀಕ್ಷಿಸಲಾಗಿದೆ.

ಈ. ಕಿ.ಮೀ. 0 ನಿಂದ ಕಿ.ಮೀ.5 ರವರೆಗಿನ ಕಾಮಗಾರಿ ಅನುಮೋದನೆಯಾದ ನಂತರ ಉಳಿದ ಕಿ.ಮೀ.ಗಳಲ್ಲಿ ಅವಶ್ಯಕತೆ ಇದ್ದಲ್ಲಿ ಪರಿಶೀಲಿಸಲಾಗುವುದು.

ಉ. ಕೊಳಚೆ ಬಲದಂಡೆ ಕಾಲುವೆಯ ಮುಖಾಂತರ 1976–77 ರಿಂದ ಇಲ್ಲಿಯವರೆಗೆ ಕಿ.ಮೀ.0 ನಿಂದ ಕಿ.ಮೀ 49 ರವರೆಗೆ ನೀರನ್ನು ಪೂರೈಸಲಾಗಿದೆ. ಅನುದಾನದ ಲಭ್ಯತೆಯ ಮೇರೆಗೆ ಮತ್ತು ಆದ್ಯತೆಯ ಮೇಲೆ ಹಂಚು ಕಾಲುವೆಯ ದುರಸ್ಥಿಯನ್ನು ತೆಗೆದುಕೊಳ್ಳಲಾಗುವುದು.

1665(2162) ಶ್ರೀ ಯೋಗೀಶ ಭಟ್.ಎಸ್. (ಮಂಗಳೂರು) ಸನ್ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಚನ್ನಪಟ್ಟಣ–ರಾಮನಗರ ಗಡಿಯಲ್ಲಿರುವ ಜಾನಪದ ಲೋಕವನ್ನು ಮುಚ್ಚಲು ಆಡಳಿತ ಮಂಡಳಿ ನಿರ್ಧರಿಸಿರುವುದು ನಿಜವೇ;

ಆ. ನಿಜವಾಗಿದ್ದಲ್ಲಿ ಕಾರಣವೇನು ;

ಇ. ರಾಜ್ಯ ಸರ್ಕಾರ ಜಾನಪದ ಲೋಕಕ್ಕೆ ನೀಡುತ್ತಿದ್ದ ಅನುದಾನದ ವಿವರಗಳೇನು ;

ಈ. ಇತ್ತೀಚಿನ ವರ್ಷಗಳಲ್ಲಿ ಅನುದಾನವನ್ನು ಕಡಿಮೆ ಮಾಡಿರುವುದು ನಿಜವೇ ;

ಉ. ಹೌದಾದಲ್ಲಿ, ಕಾರಣಗಳೇನು ?

ಊ. ಜಾನಪದ ಕಲಾವಿದರ 'ಕಾಶಿ' ಎಂದು ಪ್ರಸಿದ್ದವಾಗಿರುವ ಜಾನಪದ ಲೋಕವನ್ನು ಉಳಿಸಿ ಬೆಳೆಸಲು ಸುಕ್ತ ಪ್ರಮಾಣದ ಅನುದಾನ ಮತ್ತಿತರ ವ್ಯವಸ್ಥೆಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಧರಂಸಿಂಗ್ (ಸನ್ಮಾನ್ಯ ಮುಖ್ಯ ಮಂತ್ರಿಗಳು) :

ಅ. 1. ಹೌದು.

2. ಆದರೆ ಮುಚ್ಚದಿರುವಂತೆ ತೀರ್ಮಾನಿಸಿರುವುದಾಗಿ ಹೇಳಿಕೆ ನೀಡಿರುತ್ತಾರೆ.

ಆ. ಅನುದಾನ ಹೆಚ್ಚಿಸುವ ಬೇಡಿಕೆ ಈಡೇರಿರುವುದಿಲ್ಲ ಎಂಬ ಕಾರಣದಿಂದ ಪ್ರಾಧಿಕಾರದ ಅಧ್ಯಕ್ಷರು ಹೇಳಿಕೆ ನೀಡಿದ್ದಾರೆ.

ಇ. ಕಳೆದ ಆರು ವರ್ಷಗಳಲ್ಲಿ ನೀಡಿದ ವಿವರಗಳನ್ನು ಒದಗಿಸಲಾಗಿದೆ.

| | | |
|---|---|---|
| 1. | 1998–99 | ರೂ. 15.00 ಲಕ್ಷ |
| 2. | 1999–2000 | ರೂ. 15.00 ಲಕ್ಷ |
| 3. | 2000–2001 | ರೂ. 15.00 ಲಕ್ಷ |
| | | ರೂ. 25.00 ಲಕ್ಷ |
| | | (ಹೆಚ್ಚುವರಿಯಾಗಿ) |
| 4. | 2001–02 | ರೂ. 15.00 ಲಕ್ಷ |
| 5. | 2002–03 | ರೂ. 10.00 ಲಕ್ಷ |
| 6. | 2003–04 | ರೂ. 10.40 ಲಕ್ಷ |
| 7. | 2004–05 | ರೂ. 8.20 ಲಕ್ಷ |

(ಈಗಾಗಲೇ ರೂ. 3.00 ಲಕ್ಷ ಬಿಡುಗಡೆಯಾಗಿದ್ದು 2ನೇ ಕಂತು ರೂ 5.20 ಲಕ್ಷಗಳನ್ನು ಬಿಡುಗಡೆ ಮಾಡಲಾಗುತ್ತಿದೆ.)

ಈ. –ನಿಜ–

ಆದರೆ ಸರ್ಕಾರ ಈ ಸಂಸ್ಥೆ ಅನುದಾನ ಸಂಹಿತೆ ಒಳಪಟ್ಟಿರುವುದರಿಂದ ಸರ್ಕಾರ ಅನುಮೋದಿಸಿದ ಸಿಬ್ಬಂದಿ ವೇತನವನ್ನು ಕಡಿತಗೊಳಿಸಿರುವುದಿಲ್ಲ.

ಉ. –ಅದೇ–

ಊ. ಸರ್ಕಾರ ಅನುಮೋದಿತ ಸಿಬ್ಬಂದಿ ಅನುದಾನ ಸಂಹಿತೆಗೆ ಒಳಪಟ್ಟಿರುವಂತೆ ವೇತನವನ್ನು ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

1666(2163) ಶ್ರೀ ಯೋಗೀಶ್ ಭಟ್. ಎನ್. (ಮಂಗಳೂರು) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಕೆರೆ ಮತ್ತು ಜಲಾಶಯಗಳ ಸಂಖ್ಯೆ ಎಷ್ಟು; ಮಂಗಳೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಕೆರೆಗಳ ಸಂಖ್ಯೆ ಎಷ್ಟು ;

ಆ. ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕೆರೆ– ಜಲಾಶಯಗಳನ್ನು ಅಭಿವೃದ್ಧಿಪಡಿಸಲಾಗಿದೆ;

ಇ. ಅದಕ್ಕಾಗಿ ವಿನಿಯೋಗಿಸಿದ ಮೊತ್ತವೆಷ್ಟು ;

ಈ. ಅಭಿವೃದ್ಧಿಗೆ ಒಳಪಡಿಸದೆ ಇರುವ ಕೆರೆಗಳ ಹೂಳೆತ್ತುವ ಕಾಮಗಾರಿಯನ್ನು ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಲ ಸಂಪನ್ಮೂಲ ಇಲಾಖೆಯಿಂದ ನಿರ್ವಹಿಸಲಾಗುತ್ತಿರುವ ಕೆರೆಗಳ ಸಂಖ್ಯೆ 2 ಮತ್ತು ಜಲಾಶಯಗಳ ಸಂಖ್ಯೆ 1. ಮಂಗಳೂರು ವಿಧಾನ ಸಭಾ ಕ್ಷೇತ್ರದಲ್ಲಿ ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಯಾವುದೇ ಕೆರೆಗಳು ಇರುವುದಿಲ್ಲ.

ಆ. ಅಚ್ಚುಕಟ್ಟು ಇಲ್ಲದೆ ಇರುವುದರಿಂದ ಅವುಗಳನ್ನು ಅಭಿವೃದ್ಧಿಪಡಿಸಿರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಉದ್ಭವಿಸುವುದಿಲ್ಲ.